ಮಾಡಿದರಾಯಿತೆಂದು ಸುಮ್ಮನಾದೆ.

ವಿಶಾಖಪಟ್ಟಣದಲ್ಲಿ ಅವರ ಮನೆ ಹುಡುಕುವುದೇನೂ ಕಷ್ಟವಾಗಲಿಲ್ಲ. ಮನೆ ಬೀಗ ತೆಗೆದು ಸಾಮಾನುಗಳನ್ನು ಒಳಗಿಟ್ಟು ಬಾಗಿಲ ಹಿಂದಿದ್ದ ಚಾಪೆಯನ್ನು ತಂದು ವರಾಂಡಾದಲ್ಲಿ ಹರಡಿದೆ. ಆಂಬುಲೆನ್ಸಿನವರು ಶವವನ್ನು ತಂದು ಚಾಪೆಯ ಮೇಲಿಟ್ಟು ಅವರಪಾಡಿಗೆ ಅವರು ಹೊರಟುಹೋದರು.

ನಾನು ಅವರ ಫೋನಿನಿಂದಲೇ ವಕೀಲರಿಗೆ ಫೋನು ಮಾಡಿದೆ. ಅವರು ಫೋನು ಎತ್ತಲೇ ಇಲ್ಲ.

"ಹೇಳಿ ಶೇಷೂ... ನಿಮಗೊಂದು ಶುಭವಾರ್ತೆ. ವೈಜಾಗ್ ಬಂದಾಯ್ತಾ?..." ಕೊನೆಗೆ ವಕೀಲರೇ ಫೋನು ಮಾಡಿ ಕೇಳಿದರು.

"ಅವರು ಬಂದಿಲ್ಲ. ತಗೊಂಡುಬಂದಿದೀನಿ..." ಎಂದೆ ನಾನು.

"ಅವರು ಬರಲಿಲ್ಲ, ತಗೊಂಡುಬಂದೆ ಅಂದ್ರೆ ಅರ್ಥ ಏನು? ಅವರಿಗೇನಾಗಿದೆ? ನೀವು ಯಾರು?" ಪ್ರಶ್ನೆಗಳ ಸುರಿಮಳೆಯನ್ನೇ ಸುರಿಸಿದ್ದರು ಲಾಯರ್.

"ನಾನು ರೈಲಿನಲ್ಲಿ ಅವರೊಡನೆ ಪ್ರಯಾಣ ಮಾಡಿದ ಸಹಪ್ರಯಾಣಿಕ. ಸಾಮರ್ಲಕೋಟದ ಹತ್ತಿರ ಹಾರ್ಟ ಅಟ್ಯಾಕ್ ಆಗಿ ಹೋಗಿಬಿಟ್ರು. ರೈಲ್ವೇ ಡಾಕ್ಟರ್ ನೋಡಿ ಅವರ ಸಾವನ್ನು ಖಚಿತಪಡಿಸಿ ಆಂಬುಲೆನ್ಸ್ ವ್ಯವಸ್ಥೆಮಾಡಿ ನನ್ನ ರಿಕ್ವೆಸ್ಟ್ ಮಾಡಿಕೊಂಡ್ರು."

"ಈಗ ನೀವೆಲ್ಲಿದ್ದೀರಿ?" ಕೇಳಿದರಾತ.

"ನಾನು ಅವರ ಶವದ ಜೊತೆ ಅವರ ಮನೆ ವರಾಂಡದಲ್ಲಿದೀನಿ. ನಾನು ಹೋಗಬೇಕು. ನೀವು ಬೇಗಬಂದರೆ ಒಳ್ಳೆಯದು.''

"ದಯಮಾಡಿ ನೀವು ಅಲ್ಲೇ ಇರಿ. ನಾನು ಬರೋದು ಒಂದು ಗಂಟೆಯಾಗುತ್ತೆ..." ಎಂದು ಲಾಯರ್ ಫೋನ್ ಕಟ್ ಮಾಡಿದ್ದರು.

ವಿಧಿಯಿಲ್ಲ ಎಂದುಕೊಂಡು ಒಳಗಿನಿಂದ ಒಂದು ಕುರ್ಚಿ ತಂದು ಶವದೆದುರು ಹಾಕಿಕೊಂಡು ಕುಳಿತೆ.

ಒಂದು ಗಂಟೆಯಲ್ಲಿ ಬರುತ್ತೇನೆ ಎಂದ ಲಾಯರ್ ಬರಲಿಲ್ಲ. ಅವರು ಬರುವ ವೇಳೆಗೆ ಮತ್ತೊಂದು ಗಂಟೆ ಕಳೆದಿತ್ತು.

ನಾನು ತಾಳ್ಮೆಯಿಂದ ಅವರನ್ನು ಕಾಯುತ್ತಾ ಕುಳಿತಿದ್ದೆ.

ಬಂದವರೇ ನನಗೆ ಥ್ಯಾಂಕ್ಸ್ ಹೇಳಿದರು.

"ಇನ್ನು ನಾನು ಹೊರಡ್ತೀನಿ. ಈಗಲೇ ತಡವಾಗಿದೆ..." ಎನ್ನುತ್ತಾ ಎದ್ದು ನನ್ನ ಸಾಮಾನುಗಳನ್ನು ತೆಗೆದುಕೊಂಡೆ.

"ನೀವು ಅನ್ಯಥಾ ಭಾವಿಸಬೇಡಿ. ಅವರಿಗೆ ಬಂಧುಗಳು ಯಾರೂ ಇಲ್ಲ. ನಾನು ಅವರ ವಕೀಲ ಮಾತ್ರ. ಇವತ್ತು ಕೋರ್ಟಿನಲ್ಲಿ ನನಗೆ ಅರ್ಜೆಂಟ್ ಕೇಸೊಂದು ಇದೆ. ತಪ್ಪಿಸಿಕೊಳ್ಳುವ ಹಾಗಿಲ್ಲ. ನಾನು ಬರ್ತಾ ಬ್ರಾಹ್ಮಣರಿಗೆ ಹೇಳಿ ಬಂದಿದೀನಿ. ಇನ್ನೇನು ಅವರು ಬರಬಹುದು. ಈ ಇಪ್ಪತ್ತೈದು ಸಾವಿರ ಅವರಿಗೆ ಕೊಡಿ. ಇಷ್ಟೆಲ್ಲಾ ಮಾಡಿದೀರಿ ನೀವು. ದಯವಿಟ್ಟು ಇನ್ನೊಂದು ಉಪಕಾರ ಮಾಡಿ. ಶವದ ಜೊತೆ ಹೋಗಿ ಉಳಿದ ಕೆಲಸವನ್ನು ಮುಗಿಸಿಕೊಡಿ. ಮತ್ತೊಂದು ಮಾತು. ಸಾಯಂಕಾಲ ನೀವು ನಮ್ಮ ಆಫೀಸಿಗೆ ಬನ್ನಿ. ನನ್ನ ಕಾರ್ಡ್ ತೆಗೆದುಕೊಳ್ಳಿ. ನಿಮ್ಮ ಫೋನ್ ನಂಬರ್ ಕೊಡಿ. ದಯಮಾಡಿ ಇದೊಂದು ಉಪಕಾರ ಮಾಡಿ... ಪ್ಲೀಸ್" ಎಂದರು ವಕೀಲರು.

ಇಷ್ಟು ಮಾಡಿದವನು, ಮುಂದಿನ ಕಾರ್ಯಗಳನ್ನೂ ಪೂರ್ಣಗೊಳಿಸಿ ಹೋಗುವುದೇ ಧರ್ಮವೆನಿಸಿ ಆಗದು ಎನ್ನಲಾಗದೆ ಸಮ್ಮತಿ ಸೂಚಿಸಿದೆ.